ವಾರದ ಪತ್ರ

## ವೈವಿಧ್ಯ ಸೊರಗದಿರಲಿ

ಝೀ ಟಿ.ವಿ.ಯಲ್ಲಿ ನಟ ರಮೇಶ್ ಅವರು ನಡೆಸಿ ಕೊಡುತ್ತಿರುವ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮ ವೀರೇಂದ್ರ ಹೆಗಡೆರವರ ಮೂಲಕ ಆರಂಭವಾದಾಗ ಭರವಸೆ ಮೂಡಿಸಿತ್ತು. ಸುಧಾ ಮತ್ತು ನಾರಾಯಣ ಮೂರ್ತಿರವರ ಸಂದರ್ಶನ ಇಡೀ ಕಾರ್ಯಕ್ರಮಕ್ಕೆ ಕಿರೀಟವಿರಿಸಿದಂತಾಗಿತ್ತು. ಈ ತನಕ ಈ ಕುರ್ಚಿಯಲ್ಲಿ ಹತ್ತಾರು ಮಂದಿ ಕುಳಿತು ಹೋಗಿದ್ದಾರೆ. ಕೆಲವರನ್ನು ಹೊರತುಪಡಿಸಿದರೆ ಮಿಕ್ಕವರೆಲ್ಲಾ ಬೆಳ್ಳಿ ತೆರೆಯ ಕಲಾವಿದರು. ನಾಗಾಭರಣ, ಸುಮಲತಾ ಆದರೆ ಇನ್ನೂ ಸಾಧನೆಯ ಹಾದಿಯಲ್ಲಿರುವ ಮುರಳಿ, ಶರಣ್‌ರ ಸಂದರ್ಶನಕ್ಕೆ ಆತುರ ಬೇಕಿತ್ತೇ?

ಕರ್ನಾಟಕದ ಸಾರ್ವಜನಿಕ ಬದುಕಿನಲ್ಲಿ ಕೊಡುಗೆ ನೀಡಿದ ಹಲವಾರು ಮಹನೀಯರು ನಮ್ಮ ನಡುವೆ ಇದ್ದಾರೆ. ಕೇವಲ ಸಿನಿಮಾ ನಾಟಕ ಕ್ಷೇತ್ರಕ್ಕೆ ಆದ್ಯತೆ ನೀಡುವುದನ್ನು ನಿಲ್ಲಿಸಿ ಕ್ರೀಡೆ, ಸಾಹಿತ್ಯ, ಪತ್ರಿಕೋದ್ಯಮ, ಜನಪದ, ಭಾಷೆ, ನೃತ್ಯ, ಕೃಷಿ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರ ಸಾಹಸವೂ ಇಲ್ಲಿ ಸಿಂಹಾವಲೋಕನವಾಗಲಿ. ಉತ್ತಮ ಕಾರ್ಯಕ್ರಮ ಏಕತಾನತೆಯಿಂದ ಸೊರಗದೆ ವೈವಿಧ್ಯಮಯವಾಗಿರಲಿ ಎಂಬುದೇ ನಮ್ಮ ಹಾರೈಕೆ, ಅಭಿಲಾಷೆ.

—ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ಅವಸರ: ಝೀ ವಾಹಿನಿಯ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದ ಬಗ್ಗೆ ಒಂದೆರಡು ಮಾತು ಹೇಳಬೇಕೆನಿಸಿತು. ಚಿಕ್ಕಣ್ಣ ಅವರು ಅಪ್ರತಿಮ ಕಲಾವಿದ ಹಾಗೂ ಚಿಕ್ಕವಯಸ್ಸಿನಲ್ಲೇ ಯಶಸ್ಸು ಕಂಡಿರುವ ಹೆಮ್ಮೆಯ ಕನ್ನಡಿಗ ಎಂಬುದು ನಮಗೆ ಖುಷಿ. ಆದರೆ ಈ ವೇದಿಕೆ ಹಿರಿಯ ಸಾಧಕರು, ಅದರಲ್ಲೂ ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಹೆಚ್ಚು ಸೂಕ್ತವೆನಿಸುತ್ತದೆ.

—ಬಿ.ಬಿ. ನೀಲಕಂಠಪ್ಪ, ಹಾಸನ

## ಕುಸಿದ ಕನಸು

ಕೆಲವಾರು ತಿಂಗಳುಗಳ ಹಿಂದೆ ಸುವರ್ಣ ಚಾನಲ್‌ನ 'ಕೃಷ್ಣ ತುಳಸಿ' ವೀಕ್ಷಕರ ಮೆಚ್ಚುಗೆಯನ್ನು ಗಳಿಸಿದ್ದರೂ ಅದನ್ನು ಅವಸರವಾಗಿ ಮುಗಿಸಿಬಿಟ್ಟದ್ದು ನೋಡಿ ನಿರಾಶೆಯಾಯಿತು. ಉತ್ತಮ ಕಥೆಗಳೇ ಇಲ್ಲದ, ಬರೀ ಮೋಸ, ವಂಚನೆಗಳೇ ತುಂಬಿರುವ ಧಾರಾವಾಹಿಗಳು ವರ್ಷಾನುಗಟ್ಟಲೆ ಓಡುವಾಗ ಇಂಥ ಧಾರಾವಾಹಿಗಳೇಕೆ ಅರ್ಧದಲ್ಲೇ ನಿಲ್ಲಬೇಕು. ಇವರ ಹುನ್ನಾರವಾದರೂ ಏನು?

—ಪುಷ್ಪ. ಎನ್.ಕೆ. ರಾವ್ ಉಡುಪಿ

## ಅಸಂಬದ್ಧ, ಅಸಹಜ ಹಾಗೂ ತಪ್ಪು ಲೆಕ್ಕ

ಅವನಿ ವೇಷದಲ್ಲಿ ರಾಣಿಯನ್ನು ಒಂದು ಬಂಗಾರದ ನೆಕ್ಲೇಸ್ ವಿಷಯದಲ್ಲಿ ಮನೆಯ ಎಲ್ಲಾ ಸದಸ್ಯರ ಎದುರು ಪರೀಕ್ಷೆ ಮಾಡಿ, ನಂತರ ಪೊಲೀಸರು ಬಂದಾಗ, ಸಾಲಂಕೃತವಾಗಿದ್ದ ರಾಣಿಯನ್ನು ಪೊಲೀಸರು ಕರೆದೊಯ್ಯುವುದು ಅಸಂಬದ್ಧ, ಅಸಹಜ. ಒಂದು ನೆಕ್ಲೇಸಿಗೆ ಪಂಚಾಯಿತಿ ಮಾಡಿದವರು, ಅವಳನ್ನು ಅಷ್ಟೊಂದು ಒಡವೆ ಸಮೇತ ಪೊಲೀಸರೊಡನೆ ಕಳಿಸುವುದು ತೀರಾ ಕಳಪೆ ತೋರಿಸುತ್ತದೆ.

ಅನಿತಾ ಗರ್ಭಿಣಿಯ ಸುದ್ದಿ. ಸಾಮಾನ್ಯವಾಗಿ ಗರ್ಭಿಣಿಯೊಬ್ಬಳು ಡಾಕ್ಟರ್ ಪರೀಕ್ಷೆಗೆ ಒಳಗಾಗುವುದು ಗರ್ಭಾವಸ್ಥೆಯ 6 ರಿಂದ 8 ವಾರಗಳಲ್ಲಿ. ಸುದ್ದಿ ತಿಳಿದು ಬಂದ ಹೇಮಾ, ಮನೆಯದುರಿಗೆ ಇನ್ನೂ ಒಂಬತ್ತು ತಿಂಗಳಿಗೆ ನಮ್ಮ ಮನೆಗೆ ಪುಟ್ಟ ಪಾಪುವನ್ನು ಅನಿತಾ ತರುತ್ತಾಳೆ ಎಂದು ತಿಳಿಸುತ್ತಾಳೆ. ಮನೆಯಲ್ಲಿ ಹಿರಿಯ ಮಹಿಳೆಯರಾದ ಸಿತಾರ, ನಳಿನಿ, ಸರಸ್ವತಿ ಎಲ್ಲರೂ ಇನ್ನು ಒಂಬತ್ತು ತಿಂಗಳಿಗೇ ಎಂದು ಹೇಳುತ್ತಾರೆ. ಇದು ಇನ್ನು ಏಳೆಂಟು ತಿಂಗಳಿಗೆ ಎಂದು ಹೇಳಬೇಕಾಗಿತ್ತು.

ಈ ಧಾರಾವಾಹಿಯಲ್ಲಿ ಖಳನಾಯಕಿಯಾದ 'ಸಿತಾರ' ರಹಸ್ಯವೆಲ್ಲಾ ಬಯಲಾಗುವ ಸಮಯ ಹತ್ತಿರವಾಗಿದೆ. ಧಾರಾವಾಹಿಯನ್ನು ರಬ್ಬರಿನಂತೆ ಎಳೆಯದೆ ಬೇಗನೆ ಅಂತ್ಯ ಕಾಣಿಸುವುದು ಅತ್ಯಂತ ಸೂಕ್ತ.

— ದಾ.ಭೀ. ಪ್ರಾಣೇಶರಾವ್, ಬೆಂಗಳೂರು

## ದುರ್ಬಲ ಕತೆಯ ಹಂದರ

'ಸೀತಾ ವಲ್ಲಭ' ದುರ್ಬಲ ಕತೆಯ ಹಂದರವುಳ್ಳ ಧಾರಾವಾಹಿ. ಈ ಧಾರಾವಾಹಿಯ ನಾಯಕ ಹಾಗೂ ನಾಯಕಿ ತುಂಬ ಅಮಾಯಕರು. ಕಥಾನಾಯಕಿ ಮೈಥಿಲಿ ಅಳುಮುಂಜಿ. ಅವಳಂತಹ ಅಮಾಯಕರು ಇರುತ್ತಾರೆಯೇ ಎಂದು ಭೂತಗನ್ನಡಿ ಹಿಡಿದು ಹುಡುಕಬೇಕಾಗುತ್ತದೆ. ತಾನು ಅಗ್ನಿಸಾಕ್ಷಿಯಾಗಿ ಆರ್ಯನನ್ನು ಮದುವೆಯಾಗಿದ್ದರೂ ತನ್ನ ಸ್ಥಾನವನ್ನು ಅಂಕಿತಾಳಿಗೆ ಬಿಟ್ಟುಕೊಡಲು ಪ್ರಯತ್ನಿಸುವುದು, ಅವಳಿಗೆ ಹೆದರುವುದು, ಸತ್ಯವನ್ನು ಮುಚ್ಚಿಡುವುದು ಇವನ್ನೆಲ್ಲ ಅವಳು ಏಕೆ ಮಾಡುತ್ತಾಳೋ ತಿಳಿಯದು. ವೈಚಾರಿಕತೆಗೆ ಅವಳ ಬಳಿ ಸ್ಥಾನವೇ ಇಲ್ಲ. ಅವಳ ಪಾತ್ರ ಅರವತ್ತರ ದಶಕದ ಹಿಂದಿ ಚಲನಚಿತ್ರದ ಸತಿಸಾವಿತ್ರಿಯಂತಹ ತ್ಯಾಗಮಯಿ ಸೊಸೆಯ ಪಾತ್ರವನ್ನು ಹೋಲುತ್ತದೆ.

ಕಥಾನಾಯಕಿಗೆ ಮೈಥಿಲಿ ಎಂಬ ಹೆಸರೇನೋ ಒಪ್ಪುತ್ತದೆ. ಆದರೆ ಆರ್ಯನಿಗೆ ಸೀತಾವಲ್ಲಭ ಎಂಬ ಹೆಸರು ಸ್ವಲ್ಪವೂ ಒಪ್ಪುವುದಿಲ್ಲ. ಸೀತಾವಲ್ಲಭ ಎಂದರೆ ರಾಮ ಎಂದು ಅರ್ಥ. ಆದರೆ ಆರ್ಯನಲ್ಲಿ ರಾಮನ ಒಂದು ಗುಣವೂ ಇಲ್ಲ. ರಾಮ ಏಕಪತ್ನಿ ವ್ರತಸ್ಥ, ಆದರೆ ಈ ಸೀತಾವಲ್ಲಭ ಹೆಂಡತಿಯನ್ನು ಪ್ರೀತಿಸುತ್ತ ಇನ್ನೊಂದೆಡೆ ಅಂಕಿತಾಳನ್ನು ಬಿಡಲು ಮನಸ್ಸಿಲ್ಲದ ದುರ್ಬಲ ಮನಸ್ಸಿನ ಗಂಡಸು.

—ಮುರಲೀಧರ ಕುಲಕರ್ಣಿ, ಬೀದರ್

## ವ್ರತ ಫಲಿಸಲಿ

'ಕುಲವಧು'ದಲ್ಲಿ ಕಳೆದು ಹೋಗಿರುವ ಮಗಳು ಮೌನಳಿಗಾಗಿ ಧನ್ಯ ಕಠಿಣ ವ್ರತ ಮಾಡುತ್ತಾಳೆ. ಈ ವ್ರತದಿಂದ ಕಳೆದು ಹೋಗಿರುವ ಅವಳ ಮೊದಲ ಮಗುವೂ ಸಿಗಬೇಕಲ್ಲವೆ? ಗಂಡ ಹೆಂಡತಿ ಮಕ್ಕಳನ್ನು ಬೇಗ ಒಂದಾಗುವಂತೆ ಮಾಡಿ.

—ಪ್ರಭಾವತಿ ಕಾಳಪ್ಪ ಹೊಳೆನರಸೀಪುರ

## ವೈವಿಧ್ಯ ಟೀವಿ

'ಚಾನಲ್ ಒಂದು ವೈವಿಧ್ಯ ಹಲವು' ಎಂಬಂತೆ ಝೀ ಚಾನಲ್‌ನಲ್ಲಿ 'ಮಹರ್ಷಿವಾಣಿ, ಸರಿಗಮಪ, ಕನ್ನಡದ ಕಣ್ಮಣಿ, ವೀಕೆಂಡ್ ವಿತ್ ರಮೇಶ್' ಈ ಎಲ್ಲ ಕಾರ್ಯಕ್ರಮಗಳು ಜನರನ್ನು ತಲುಪುವಲ್ಲಿ ಯಶಸ್ವಿಯಾಗಿವೆ. ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಇದು ಶ್ಲಾಘನೀಯ.

—ಎಸ್. ವಿಜಯಕುಮಾರಿ, ಬೆಂಗಳೂರು

## ಇಷ್ಟು ದುರ್ಬಲವೇಕೆ?

ಭಾರತೀಯ ಮಹಿಳೆಯರ ಅಸಹಜವಾದ ಗುಣಗಳನ್ನು ಕಲ್ಪಿಸಿಕೊಂಡು, ಧಾರಾವಾಹಿಗಳು ನಿರ್ಮಾಣಗೊಳ್ಳುತ್ತಿವೆ. ಇದು ಒಳ್ಳೆಯ ಸಮಾಜದ ಸೃಷ್ಟಿಗೆ ಪೂರಕವಾಗಿಲ್ಲ. ಇದೇನು, ನಮ್ಮ ನಿರ್ಮಾಪಕರಲ್ಲಿ ಪ್ರತಿಭೆಯ ಕೊರತೆಯೇ ಅಥವಾ ಅವರ ಪ್ರತಿಭೆಯನ್ನು ತಪ್ಪು ಮಾರ್ಗದಲ್ಲಿ ಬಳಸುತ್ತಿರುವರೇ!

—ಎಂ.ಜಿ. ಶ್ರೀನಿವಾಸನ್ ಮೈಸೂರು.

## ಉಚ್ಚರಣಾ ದೋಷ

'ರಾಧಾರಮಣ'ದಲ್ಲಿ ನಾಯಕ ರಮಣ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ರುದ್ರ ಪ್ರಯಾಗದ ನರಭಕ್ಷಕ ಚಿರತೆ' ಕೃತಿಯನ್ನು ಕೈಗೆತ್ತಿಕೊಂಡು 'ರುದ್ರ ಪ್ರಯಾಗ' ಎಂದು ಉಚ್ಚರಿಸಲು ನಾಟಕೀಯವಾಗಿ ಹೆಣಗಾಡುತ್ತಾನೆ. ಕನ್ನಡದ ನಾಲ್ಕು ಅಕ್ಷರಗಳನ್ನು ಉಚ್ಚರಿಸಲು ತಡಬಡಾಯಿಸುವವನು ಕನ್ನಡ ಧಾರಾವಾಹಿಯ ಕಥಾನಾಯಕ ಹೇಗೆ ಆಗಲು ಸಾಧ್ಯ?

—ಪಿ.ಜೆ. ರಾಘವೇಂದ್ರ, ಮೈಸೂರು

